## ರಾಜಕೀಯ ಸಂಕಥನಗಳ ಕರಪತ್ರಗಳು

ಉಡುಪಿ ಜಿಲ್ಲೆಯಲ್ಲಿ ನೆಲೆಸಿರುವ ಕಂಚಾರ್ತಿ ರಾಜೇಶ್ವರ ಉಪಾಧ್ಯಾಯರು ಸುಮಾರು ಮೂವತ್ತೈದು ವರ್ಷಗಳ ಹಿಂದಿನ ಕರ್ನಾಟಕ ಹಾಗೂ ಕೇಂದ್ರದ ಎಲ್ಲ ಪಕ್ಷಗಳ ಚುನಾವಣಾ ಅಭ್ಯರ್ಥಿಗಳ ಕರಪತ್ರಗಳನ್ನು ಜೋಪಾನವಾಗಿ ಸಂಗ್ರಹಿಸಿಕೊಂಡು ಬಂದಿದ್ದಾರೆ. ಫೋಟೊದಲ್ಲಿರುವ ಕೆಲವು ಅಭ್ಯರ್ಥಿಗಳು ಈಗ ಸುಮಾರು 60 ವರ್ಷ ದಾಟಿದವರು, ಇನ್ನೂ ಕೆಲವರು ಈಗಲೂ ರಾಜಕಾರಣದಲ್ಲಿ ಇದ್ದಾರೆ. ಇನ್ನೂ ಕೆಲವರು ದಿವಂಗತರಾಗಿದ್ದಾರೆ. ಕರಪತ್ರಗಳ ಭಾವ ಚಿತ್ರದಲ್ಲಿ ಇಂದಿರಾಗಾಂಧಿ, ರಾಜೀವ್ ಗಾಂಧಿ, ವಾಜಪೇಯಿ, ರಾಮಕೃಷ್ಣ ಹೆಗಡೆ, ಎಸ್. ಸುರೇಶ್ ಕುಮಾರ್, ಎಂ.ಎಸ್. ನಾರಾಯಣ್ ರಾವ್, ಆರ್. ಗುಂಡೂರಾವ್, ಎನ್. ರಘುಪತಿ, ಆರ್.ವಿ. ಹರೀಶ್, ವೈ.ಎಸ್. ದತ್ತ, ಕೆ. ಲಕ್ಕಣ್ಣ ಮುಂತಾದವರನ್ನು ಕಾಣಬಹುದು. ಇದರ ಜೊತೆ ಬೇರೆ ಬೇರೆ ಪಕ್ಷಗಳ ಚಿಹ್ನೆಯ ಬ್ಯಾಡ್ಜ್‌ಗಳ ಸಂಗ್ರಹವೂ ಇವರಲ್ಲಿದೆ.

–ಶುಭಾ ದಿವಾಕರ್, ಬೆಂಗಳೂರು






## ಅರಿಶಿನದ ಹೂವು

ಹೂವುಗಳಿಗೆ ಮನ ಸೋಲದವರಿಲ್ಲ. ಹೆಸರೇ ಗೊತ್ತಿಲ್ಲದ ಅನೇಕ ಸುಮಗಳು ಈ ಜೀವ ಜಗತ್ತಿನಲ್ಲಿ ಗುರುತು ಮೂಡಿಸಿವೆ. ಕರಾವಳಿ ಭಾಗದಲ್ಲಿ ಬಹುತೇಕರ ಮನೆಗಳಲ್ಲಿ ಅರಿಶಿನದ ಗಿಡಗಳನ್ನು ಕಾಣಬಹುದು. ಅದರ ಎಲೆಗಳಿಂದ ವಿಶೇಷವಾದ ಖಾದ್ಯ ತಯಾರಿಸುತ್ತಾರೆ. ನೆಲದೊಳಗಿರುವ ಗೆಡ್ಡೆಯನ್ನು ತೆಗೆದು, ಒಣಗಿಸಿ, ಕುಟ್ಟಿ, ಶುದ್ಧವಾದ ಅರಿಶಿನ ಪುಡಿಯನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ಸಹಜವಾಗಿ ಅರಿಶಿನ, ಅರಿಶಿನ ಗಿಡ ನೋಡಿರುವ ನಗರವಾಸಿಗಳಿಗೆ ಅದರ ಹೂವಿನ ಪರಿಚಯವೇ ಇರುವುದಿಲ್ಲ. ತನ್ನ ನಸು ಗುಲಾಬಿ ಬಣ್ಣದೊಂದಿಗೆ ಎಲ್ಲರನ್ನೂ ಆಕರ್ಷಿಸುವ ಅರಿಶಿನ ಗಿಡದ ಹೂವಿಗೆ ಮನ ಸೋಲದವರಿಲ್ಲ. ಇದು ಒಂದು ವಾರದವರೆಗೆ ಒಣಗದೆ ಹಾಗೆಯೇ ಇರಬಲ್ಲದು.

–ಶ್ರುತಿ ಎಸ್., ಬೆಂಗಳೂರು



## ಹೀಗೂ ಮಾಡ್ತಾರೆ ತರಕಾರಿಗಳ ಸಂರಕ್ಷಣೆ

ಕುಂಬಳಕಾಯಿಗಳನ್ನು ವರ್ಷಾನುಗಟ್ಟಲೆ ಸಂರಕ್ಷಿಸುವುದು ಸಾಮಾನ್ಯ. ಆದರೆ ಕರಾವಳಿ ಭಾಗದಲ್ಲಿ ಕುಂಬಳ, ಸಿಹಿಗುಂಬಳ, ಮಂಗಳೂರು ಸೌತೆಯನ್ನು ಸಂರಕ್ಷಿಸುವ ವಿಧಾನ ತುಸು ಭಿನ್ನ. ಗಿಡದಲ್ಲಿದ್ದಾಗಲೇ ಚೆನ್ನಾಗಿರುವ ಕಾಯಿಗಳನ್ನು ಆರಿಸಿ ತೆಗೆದು, ಮನೆಯ ಮುಚ್ಚಿಗೆಯ ಮಾಡಿನಲ್ಲಿರುವ ಮರದ ಪಟ್ಟಿಯಲ್ಲಿ ಬಾಳೆಯ ಅಗಲದ ಪಟ್ಟೆಯಿಂದ ಚೊಕ್ಕವಾಗಿ ಕಟ್ಟುವುದು ಈ ಭಾಗದ ವಿಶೇಷ. ಮೇಲೆ ಮುಚ್ಚಿಗೆ ಇರುವುದರಿಂದ ಇಲಿ, ಹೆಗ್ಗಣಗಳ ಕಾಟವೂ ಇರುವುದಿಲ್ಲ. ಮಳೆಗಾಲದಲ್ಲಿ ತರಕಾರಿ ತರಲು ಹೊರಗೆ ಹೋಗಲು ಸಾಧ್ಯವಾಗದಿದ್ದಾಗ ಇವು ಅಡುಗೆಗೆ ನೆರವಾಗುತ್ತವೆ.

–ಕೃಷ್ಣಮೂರ್ತಿ ರಾವ್, ಬೆಂಗಳೂರು

